ಮಹಾರಾಷ್ಟ್ರದ ಭೌಗೋಳಿಕ ಪರಿಸರ ಮರಾಠ ಇತಿಹಾಸದ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿದೆ. ಎರಡು ಕಡೆಯಿಂದಲೂ ಸಹ್ಯಾದ್ರಿ, ವಿಂಧ್ಯ ಮತ್ತು ಸಾತ್ಪುರ ಪರ್ವತ ಶ್ರೇಣಿಗಳಿಂದ ಅವೃತವಾಗಿ, ನರ್ಮದಾ ಮತ್ತು ತಪತಿ ನದಿಗಳಿಂದ ರಕ್ಷಿತವಾದ ಅನೇಕ ಕೋಟೆ, ಕೊತ್ತಲುಗಳಿಂದ ಕೂಡಿತ್ತು ಮರಾಠಾ ದೇಶ. ಶತ್ರು ಸೈನ್ಯಗಳಿಂದ ಸುಲಭವಾಗಿ ಆಕ್ರಮಣಕ್ಕೆ ಒಳಗಾಗದಂತೆ ಈ ಕೋಟೆಗಳ ವ್ಯೂಹ ರಚನೆ ಇರುತ್ತಿತ್ತು. ಅಂತಹ ಕೋಟೆಗಳಲ್ಲಿ ಸುಭದ್ರವೂ, ಸುಂದರವೂ ಆದ ಪ್ರತಾಪಗಡ ಕೋಟೆ, ಛತ್ರಪತಿ ಶಿವಾಜಿ ಮಹಾರಾಜರ ರಾಜಕೀಯ ಇತಿಹಾಸವನ್ನು ರೂಪಿಸಿದ ಪ್ರಮುಖ ಕೋಟೆಗಳಲ್ಲಿ ಒಂದು.

ಶಿವಾಜಿಯ ಧೈರ್ಯ, ಸಾಹಸಗಳಿಗೆ ಸಾಕ್ಷಿಯಾದ ಈ ಕೋಟೆ ಇಂದಿಗೂ ಅದೇ ಗತ್ತಿನಿಂದ ತಲೆ ಎತ್ತಿ ನಿಂತಿದೆ. ತಂಪು ಹವೆಯ ಕೋಟೆಯ ಪರಿಸರ, ಸದಾ ಮಳೆಯಿಂದ ಜಿನುಗುಡುವ ಕಾರಣಕ್ಕೆ ಕೋಟೆಯ ತುಂಬ ಹಸಿರು ಪಾಚಿ ಕಟ್ಟಿಕೊಂಡೇ ನಮ್ಮನ್ನು ಕೈ ಬೀಸಿ ಕರೆಯುತ್ತದೆ. ಕೋಟೆಗೋಡೆಯ ಮೇಲಿನ ಈ ಹಸಿರುಪಾಚಿ ಹಲವೆಡೆ ಪ್ರಕೃತಿಯ ಕಲಾತ್ಮಕ ಚಿತ್ರಗಳನ್ನು ಬಿಡಿಸಿದೆ. ದೈತ್ಯ ಗಾತ್ರದ ಕಲ್ಲುಗಳನ್ನು ನಾಜೂಕಾಗಿ ಕತ್ತರಿಸಿ ಕಟ್ಟಿರುವ ಕೋಟೆ, ಬಾಗಿಲುವಾಡೆ– ಹೀಗೆ ಎಲ್ಲೆಡೆಲ್ಲೂ ಕಲಾತ್ಮಕ ಸ್ಪರ್ಶ ನೀಡಿರುವ ಅಂದಿನ ಶಿಲ್ಪಿಗಳಿಗೆ ನಾವು ಸಲಾಂ ಹೇಳಲೇಬೇಕು!

ಮಹಾರಾಷ್ಟ್ರದ ಸತಾರ ಜಿಲ್ಲೆಯ ಮಹಾಬಲೇಶ್ವರದಿಂದ 22 ಕಿ.ಮೀ. ದೂರದಲ್ಲಿರುವ ನೀರಾ ಹಾಗೂ ಕೊಯ್ನಾ ನದಿಗಳ ದಂಡೆಯಲ್ಲಿ ಈ ಪ್ರತಾಪಗಡ ಕೋಟೆಯನ್ನು ಕ್ರಿ.ಶ. 1656ರಲ್ಲಿ ಶಿವಾಜಿ ನಿರ್ಮಾಣ ಮಾಡಿಸಿದ. ಇಲ್ಲಿಯ ಕೋಟೆಗೆ ಎರಡು ವಿಭಾಗಗಳಿದ್ದು, ಕೆಳಗಿನ ಕೋಟೆ ಮತ್ತು ಮೇಲಿನ ಕೋಟೆ ಎಂದು ಕರೆಯಲಾಗುತ್ತಿದೆ.

ಕೆಳಗಿನ ಕೋಟೆಯಲ್ಲಿ ಝುಂಡಾಬತ್ತೇರಿ ಇದ್ದು ತಳಪಾಯದ ಬೆಟ್ಟದ ಆಕೃತಿಗೆ ಅನುಗುಣವಾಗಿಯೇ ಕೋಟೆ ನಿರ್ಮಿಸಲಾಗಿದೆ. ಹೀಗಾಗಿ ಇದು ಕಲಾತ್ಮಕವಾಗಿ ರೂಪುಗೊಂಡು ಎಲ್ಲರ ಗಮನ ಸೆಳೆಯುತ್ತದೆ. ಬತ್ತೇರಿಯ



ಕೋಟೆಯ ಹೊರಭಾಗ



ಕೋಟೆಯ ಬಾಗಿಲು ವಾಡೆ